# ಆಹಾ ಸುದ್ದಿ!

★ ಸಸಿತೋಟ



ಎಲ್ಲವೂ ಹಾರಾಡುವ, ಶೂನ್ಯ ಗುರುತ್ವಾಕರ್ಷಣೆ ಇರುವ ಬಾಹ್ಯಾಕಾಶ ನಿಲ್ದಾಣದಲ್ಲಿ ತಲೆಸ್ನಾನ ಮಾಡುವುದು ಹೇಗೆ? ಇದನ್ನು ತೋರಿಸಲೆಂದೇ ನಾಸಾ ಗಗನಯಾತ್ರಿ ಕರೆನ್ ನೈಬರ್ಗ್ ತಲೆಸ್ನಾನ ಮಾಡುವ ವಿಡಿಯೋ ಬಿಡುಗಡೆ ಮಾಡಿದ್ದಾರೆ. ಒಂದೆರಡು ಹನಿ ಬಿಸಿನೀರು, ಒಂದೆರಡು ಹನಿ ಶಾಂಪೂ ತಲೆಗೆ ಸಿಂಪಡಿಸಿ ಹಣೆಗೆಯಿಂದ ಮೇಲಕ್ಕೆ ಹಾರಾಡುವ ಕೂದಲನ್ನು ಬಾಚಿ ಟವೆಲ್‌ನಿಂದ ಒತ್ತಿ ಒರೆಸಿಕೊಂಡರು. ಕೂದಲಿನ ಜೊತೆ ನೀರು ಕೂಡಾ ಅತ್ತಿತ್ತ ಹಾರಾಡುವ ವಿಡಿಯೋವನ್ನು ಭೂಮಿಯ ಮೇಲಿದ್ದವರು ನೋಡಿ ಅಂಥದ್ದೇ ಸ್ನಾನದ ಕೊಠಡಿಗೆ ಬೇಡಿಕೆ ಇಡಬಹುದೇನೋ! ಜೊತೆಗೆ ತಲೆಸ್ನಾನವೊಂದೇ ಸಾಲದು, ಪೂರ್ತಿ ಸ್ನಾನದ ವಿಡಿಯೋಗೂ ಬೇಡಿಕೆ ಬರಬಹುದು.

ಅಮೆರಿಕಾದಲ್ಲಿ ಕಚೇರಿಯ ಮಹಿಳಾ ಉದ್ಯೋಗಿ ಅತ್ಯಂತ ಸುಂದರವಾಗಿದ್ದರೆ ಕೆಲಸದಿಂದ ತೆಗೆದು ಹಾಕಬಹುದು. ದಂತವೈದ್ಯನ ಸಹಾಯಕಿಯೊಬ್ಬಳು ಸುಂದರಿಯಾಗಿದ್ದು, ತನ್ನ ಗಂಡನನ್ನು ಕಾಪಾಡಿಕೊಳ್ಳಲು ಆತನ ಪತ್ನಿಯೇ ಆಕೆಯನ್ನು ಕೆಲಸದಿಂದ ತೆಗೆದು ಹಾಕಲು ಸೂಚನೆ ನೀಡಿದ್ದಳಂತೆ. ಕೆಲಸ ಕಳೆದುಕೊಂಡವಳು ಕೋರ್ಟಿಗೆ ಹೋದರೂ ಲಿಂಗ ತಾರತಮ್ಯ ನಡೆದಿಲ್ಲ ಎಂದು ತೀರ್ಪು ಬಂತು. ಇದು 'ನೀನು ಸುಂದರಿ, ನೀನು ಮನೆಯಲ್ಲೇ ಸುರಕ್ಷಿತ' ಎಂಬಂತಹ ಅರ್ಥ ನೀಡುತ್ತದೆ ಎಂದು ಮಹಿಳಾವಾದಿಗಳು ಹುಯಿಲೆಬ್ಬಿಸಿದ್ದಾರಂತೆ.

ರಷ್ಯಾ ಅಧ್ಯಕ್ಷ ಪುಟಿನ್‌ಗೆ ಜನಪ್ರಿಯತೆ ಹೆಚ್ಚಿಸಿಕೊಳ್ಳುವುದು ಎಂದರೆ ಆಗಾಗ ಸಾಹಸ ಕಾರ್ಯದಲ್ಲಿ ಪಾಲ್ಗೊಳ್ಳುವುದು. ಹಿಂದೆ ಬೈಕಲ್ ಸರೋವರದಲ್ಲಿ ಮುಳುಗು ಹಾಕಿದ್ದರು, ಕಾಡ್ಗಿಚ್ಚು ಆರಿಸಿದ್ದರು, ಹುಲಿ (ಮೃಗಾಲಯದಿಂದ ತರಿಸಿದ್ದು ಎಂದು ಆಮೇಲೆ ಗೊತ್ತಾಯ್ತು) ಗೆ ಅರವಳಿಕೆ ಚುಚ್ಚುಮದ್ದು ನೀಡಿದ್ದರು ಈ ಪುಟಿನ್. ಈಚೆಗೆ ಗಲ್ಫ್ ಆಫ್ ಫಿನ್‌ಲೆಂಡ್‌ನಲ್ಲಿ ಜಲಾಂತರ್ಗಾಮಿಯಲ್ಲಿ ಇಳಿದು ಕಳೆದ ಶತಮಾನದಲ್ಲಿ ಮುಳುಗಿದ್ದ ಹಡಗಿನ ಅವಶೇಷಗಳನ್ನು ವೀಕ್ಷಿಸಿದರಂತೆ. ಭಾರತದಲ್ಲಿ ರಾಜಕಾರಣಿಗಳು ಚುನಾವಣೆಯಲ್ಲಿ ಮತಕ್ಕಾಗಿ ಮಾಡುವ ಸಾಹಸಗಳನ್ನು ಪುಟಿನ್‌ರಿಂದ ಮಾಡಲು ಸಾಧ್ಯವೇ?



ಬ್ರಿಟನ್ನಿನ ರಾಜಕುವರ ವಿಲಿಯಮ್ಸ್ ಮತ್ತು ಕ್ಯಾಥರಿನ್ ಮಗುವಿನ ಆಗಮನಕ್ಕಾಗಿ (ಇದನ್ನು ಬರೆಯುವಾಗ ಕ್ಯಾಥರಿನ್ ಹೆರಿಗೆಗಾಗಿ ಆಸ್ಪತ್ರೆ ಸೇರಿದ್ದರು) ಬೀದಿ ಬೀದಿಗಳಲ್ಲೂ ಸಂಭ್ರಮದ ಆಚರಣೆ ನಡೆದಿದೆ ಎಂಬುದನ್ನು ಈ ಬೋರ್ಡ್ ನೋಡಿದರೇ ಗೊತ್ತಾಗುತ್ತದೆ. ಆಕೆ ಹೆರಿಗೆಗಾಗಿ ದಾಖಲಾಗಿರುವ ಆಸ್ಪತ್ರೆಯ ಹೊರಗೆ ಮಗುವಿನ ಶತನಾಮಾವಳಿ ಇರುವ ಬೋರ್ಡ್ ಪ್ರದರ್ಶನವಿದು. ಬುಕ್ಕಿಗಳು ಬೆಟ್ಟಿಂಗ್‌ಗಾಗಿ ಸೃಷ್ಟಿಸಿರುವ ಹೆಸರುಗಳಿವು. ಕ್ರಿಕೆಟ್‌ನಲ್ಲಿ ಫೋರ್, ಸಿಕ್ಸರ್ ಮೇಲೆ ಬೆಟ್ಟಿಂಗ್ ಮಾಡುವಂತೆ, ಈ ಸಂದರ್ಭದಲ್ಲಿ ಹುಟ್ಟಲಿರುವ ಮಗು ಹೆಣ್ಣೋ, ಗಂಡೋ ಎಂದು ತಿಳಿಯುವ ಮೊದಲೇ ಹೆಸರುಗಳ ಮೇಲೆ ಬೆಟ್ಟಿಂಗ್. ಆದರೆ ಮ್ಯಾಚ್ ಫಿಕ್ಸಿಂಗ್ ಮಾಡುವವರು ಅಲ್ಲಿ ಯಾರೋ?






ತಿನ್ನುವ ಸಾಮುಗ್ರಿಗಳೆಲ್ಲ ಮೊಗದ ಸೌಂದರ್ಯಕ್ಕೆ ಬಳಕೆಯಾಗುತ್ತಿವೆ. ಮೀನಿನ ಪೆಡಿಕ್ಯುರ್ ಆಯಿತು. ಇತ್ತೀಚಿನ ಸೇರ್ಪಡೆ ಬಸವನ ಹುಳು. ಟೋಕಿಯೋದಲ್ಲಿ ಅವುಗಳ ಖಾದ್ಯಗಳು ಜನಪ್ರಿಯ. ಈಗ ಅವುಗಳನ್ನು ಮುಖದ ಮೇಲೆ ಬಿಟ್ಟು ಫೇಶಿಯಲ್ ಮಾಡುವ ಬ್ಯೂಟಿ ಪಾರ್ಲರ್‌ಗಳು ಅಲ್ಲಿ ಬಂದಿವೆಯಂತೆ. ಗಂಟೆಗೆ 6600 ರೂಪಾಯಿ (110 ಡಾಲರ್). ತೋಟದಲ್ಲಿ ತೆವಳುವ ಈ ಪಾಪದ ಪ್ರಾಣಿಗೂ ಒಂದಿಷ್ಟು ಬೆಲೆ ಬಂದಂತಾಯ್ತು.

ದಪ್ಪ ದೇಹದವರು ತೂಕ ಇಳಿಸುವುದಾದರೆ ದುಬೈನಲ್ಲಿ ಇಳಿಸಿಕೊಳ್ಳಬಹುದು. ಎಷ್ಟು ತೂಕ ಇಳಿಸುತ್ತೀರೋ ಅಷ್ಟು ಚಿನ್ನವನ್ನು ಅಲ್ಲಿ ಗಳಿಸಬಹುದು. ಅಲ್ಲಿಯ ಆಡಳಿತವೇ ಈ ಆಮಿಷ ಒಡ್ಡಿದೆ. ದೇಹದ ತೂಕ ಒಂದು ಕೆಜಿ ಇಳಿಸಿಕೊಂಡರೆ 1.13 ಗ್ರಾಂ ಬಂಗಾರ ದೇಹದ ಮೇಲೆ ಮಿಂಚುತ್ತದೆ. ಇದು ಆಗಸ್ಟ್ 16ರವರೆಗೂ ನಡೆಯುತ್ತದೆ. ರಮ್ಜಾನ್ ತಿಂಗಳಲ್ಲಿ ಹೇಗಿದ್ದರೂ ಉಪವಾಸ ಎಂದುಕೊಂಡು ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಪೈಪೋಟಿ ನಡೆಸುವವರಿಗೆ ಸೂಚನೆ- ಡಯಟ್ ಮೇಲೆ ಆಡಳಿತ ಕಣ್ಣಿಡುವುದಂತೆ! ತೂಕ ಕಳೆದುಕೊಂಡು ಬಡಕಲಾಗುವ ಚಿಂತೆ ಬೇಡ, ಅಷ್ಟು ತೂಕದ ಚಿನ್ನಾಭರಣ ಮೈಮೇಲೆ ಹಾಕಿಕೊಂಡು ಸರಿದೂಗಿಸಬಹುದು.